
ನುಡಿಗಳಲ್ಲಿಯೂ ಬರುವ 'ತುಂಬಿ ಬಂದಿತ್ತು' ಎಂಬ ಮಾತಿಗೆ ಒಂದೊಂದು ನುಡಿಯಲ್ಲಿ ಒಂದೊಂದು ಅರ್ಥವಿದೆ. 1. ತುಂಬಿಕೊಂಡು ಬಂದಿತ್ತು. 2. ದುಂಬಿ ಭ್ರಮರವು ಬಂದಿತ್ತು. 3. ಕಾಲವು ತುಂಬಿ ಬಂದಿತ್ತು. ಹಾಡನ್ನು ಕಿನ್ನರಿಯೊಡನಾಗಲಿ, ಏಕತಾರಿಯೊಡನಾಗಲಿ ಹೇಳಿದರೆ ಸೊಗಸು ಹೆಚ್ಚು. ನಾಟಕದಲ್ಲಿ ಅದು ಹಾಗೆ ಹೇಳಲಾಗುವದು" ಎಂದು ವಿವರಿಸಿದ್ದರು.


೫

ನಮ್ಮ ಗ್ರಾಹಕರಿಗೆ ವಿಶೇಷಸೂಚನೆ:

ಸಾಹಿತ್ಯನಿರ್ಮಾಣದ ರೂಪರೇಷೆಯನ್ನು ಓದಿನೋಡಿ ಅದರಲ್ಲಿ ಕಾಣಿಸಿದ ಎಲ್ಲ ಗ್ರಂಥಗಳೂ ಇದೇ ವರುಷದಲ್ಲಿ ಬರುತ್ತವೆಂದಾಗಲಿ, ಅದೇ ಕ್ರಮದಲ್ಲಿ ಬರುತ್ತವೆಂದಾಗಲಿ ದಯವಿಟ್ಟು ತಿಳಿದುಕೊಳ್ಳಬಾರದು.

ಅದರೊಳಗಿಂದ ಈ ವರುಷದಲ್ಲಿ (೧೯೪೯ ರ ಆಗಸ್ಟದಿಂದ ೧೯೫೦ ಜುಲೈ ಅಂತ್ಯದೊಳಗಾಗಿ) ಒಟ್ಟು ೧೫೦೦ ಪುಟಗಳನ್ನು ನಮ್ಮ ಗ್ರಾಹಕರಿಗೆ ಸಲ್ಲಿಸುತ್ತೇವೆ.

ಈ ಸಲ ನಿಯತಕಾಲಾಂತರದ ನಿರ್ಬಂಧವನ್ನು ಸ್ವಲ್ಪಮಟ್ಟಿಗೆ ಮೀರ ಬೇಕಾಗಿದ್ದರೂ ಸಲ್ಲಿಸಬೇಕಾದ ಒಟ್ಟು ಪುಟಗಳನ್ನು ಆಗಸ್ಟ ತಿಂಗಳ ಪ್ರಾರಂಭದೊಳಗಾಗಿ ಸಲ್ಲಿಸಿಯೇ ಸಲ್ಲಿಸುತ್ತೇವೆ.

ಈಗ ತೋರಿಸಿದ ಸಾಹಿತ್ಯನಿರ್ಮಾಣದ ಈ ರೂಪರೇಷೆಯನ್ನು—ಕಿರಿಯ ಹಿಂದೆ ಒಳಗೆ ಏನು ನಡೆದಿದೆ, ಹೇಗೆ ನಡೆದಿದೆ, ಯಾರು ಯಾರು ಯಾವ ಯಾವ ಕೃತಿನಿರ್ಮಾಣ ನಡೆಯಿಸಿದ್ದಾರೆ—ಎಂಬುದನ್ನು ನಮ್ಮ ಗ್ರಾಹಕರ ಕಲ್ಪನೆಗೆ ತಂದುಕೊಡುವುದಕ್ಕಾಗಿ ಇಲ್ಲಿ ಪ್ರಕಟಿಸಲಾಗಿದೆ.

ಮನೋಹರ ಗ್ರಂಥಮಾಲೆಯಲ್ಲಿ
ದ. ರಾ. ಬೇಂದ್ರೆಯವರ
ನಾಟಕಗಳು
ಮಹಾಲಕ್ಷ್ಮಿ, ಮಂದೀಮದಿವೆ, ಅಂಗಿಮ್ಯಾಲಂಗಿ, ಕಪ್ಪುಹೆಂಡತಿ, ಹೆಣ್ಣಿನಾಸೆ, ಜಾತ್ರೆ, ನಗೆಯಹೊಗೆ, ಉದ್ಧಾರ ಮೊದಲಾದ ಅವರ ಎಲ್ಲ ನಾಟಕಗಳನ್ನೂ ಸೇರಿಸಿ **ಒಂದೇ ಸಂಪುಟದಲ್ಲಿ** ಮನೋಹರ ಗ್ರಂಥಮಾಲೆಯ ಕುಸುಮವನ್ನಾಗಿ ಪ್ರಕಟಿಸುತ್ತೇವೆ.
**ಬೇಗನೇ ಪ್ರಕಟವಾಗುವುದು**

ಸ್ವತಃ ಬೇಂದ್ರೆಯವರೇ ಏಕತಾರಿಯೊಂದಿಗೆ ಹಾಡಿದ ಎರಡು ಗೀತೆಗಳ ರೆಕಾರ್ಡ್ ಅನ್ನು 1944ರಲ್ಲಿ (N. 25917) ಎಚ್ಎಂವಿ ಕಂಪನಿ ಹೊರ ತಂದಿತ್ತು. 'ಮುಗಿಲ ಮಾರಿಗೆ ರಾಗ ರತಿಯ ನಂಜ ಏರಿತ್ತ' ಹಾಗೂ 'ತುಂ ತುಂ ತುಂಬಿ ಬಂದಿತ್ತ' ಎಂಬ ಎರಡು ಹಾಡುಗಳನ್ನು ಬೇಂದ್ರೆಯವರು ಹಾಡಿದ್ದರು. ಎರಡನೆಯ ಹಾಡು ಹಾಡುವ ಮುನ್ನ ಬೇಂದ್ರೆಯವರು 'ತಲೆದಂಡ' ನಾಟಕದ ವಿಷಯ ಪ್ರಸ್ತಾಪಿಸುತ್ತಾರೆ. 'ಮಹಾನುಭಾವ ಬಸವಣ್ಣನವರನ್ನು ಕುರಿತು 'ತಲೆದಂಡ' ಎಂಬ ನಾಟಕವನ್ನು ಅರ್ಧಮರ್ಧ ಬರೆದಿದ್ದೆನು. ಅದರ ಕೊನೆಗೆ ಈ ಹಾಡು ಬರುತ್ತದೆ. ಕುರುಡು ಜಂಗಮನೊಬ್ಬ ಹಾಡುತ್ತಾನೆ. ರಾಯ ಮುರಾರಿ ತನ್ನ ತಂದೆಯನ್ನು ಕುರಿತು ಆ ಹಾಡು ಎಂದು ತಿಳಿಯುತ್ತಾನೆ. ಬಸವಣ್ಣನವರನ್ನು ಕುರಿತು ಎಂದು ಜನ ತಿಳಿಯುತ್ತಾರೆ. ಅದು ಒಬ್ಬೊಬ್ಬರ ಹಾಡೂ ಹೌದು. ಮೂರೂ ನುಡಿಗೂ ಒಂದೇ ಪಲ್ಲವಿ ತುಂಬಿ ಬಂದಿತ್ತು' ಎಂದು ವಿವರಿಸಿ ಹಾಡಿದ್ದಾರೆ.

ಅಪೂರ್ಣ ಹಸ್ತಪ್ರತಿಯನ್ನು ಇದ್ದ ಹಾಗೆಯೇ ವಾಮನ ಬೇಂದ್ರೆಯವರು 'ತಲೆದಂಡ' ಶೀರ್ಷಿಕೆಯಲ್ಲಿಯೇ 2008ರಲ್ಲಿ ಪ್ರಕಟಿಸಿದರು. ಒಟ್ಟು 53 ದೃಶ್ಯಗಳ ನಾಲ್ಕು ಭಾಗಗಳ (ಅಂಕ) ನಾಟಕ. ಒಂದನೇ ಅಂಕದಲ್ಲಿ 13 ದೃಶ್ಯಗಳಿದ್ದರೆ, ಎರಡನೇ ಅಂಕದಲ್ಲಿ 14ರಿಂದ 22 ದೃಶ್ಯಗಳು, ಮೂರನೇ ಅಂಕವು 23ರಿಂದ 38 ದೃಶ್ಯಗಳನ್ನು ಒಳಗೊಂಡಿದೆ. ನಾಲ್ಕನೇ ಅಂಕದಲ್ಲಿ 39ರಿಂದ 53 ದೃಶ್ಯಗಳಿವೆ.

ಹರಿಹರನ 'ಬಸವರಾಜ ದೇವರ ರಗಳೆ'ಯನ್ನು ಆಧರಿಸಿ ರಚಿಸಲಾದ ಈ ನಾಟಕವನ್ನು ಕಂಪನಿಗಳಿಗೆ ಬರೆದು ಕೊಡುವ ಉದ್ದೇಶ ಬೇಂದ್ರೆಯವರಿಗಿತ್ತು. ಹೀಗಾಗಿ ಈ ನಾಟಕವು ಕೈಲಾಸದ ಸೀನ್‌ನೊಂದಿಗೆ ಆರಂಭವಾಗುತ್ತದೆ. ವೃತ್ತಿರಂಗಭೂಮಿಯ ನಾಟಕಕಾರ ಆಗುವ ಕನಸು ಹೊಂದಿದ್ದ ಬೇಂದ್ರೆಯವರು ಅದಕ್ಕೆ ಅನುಗುಣವಾಗಿ ಈ ನಾಟಕ ರಚಿಸಬಯಸಿದ್ದರು. ಈ ಪುಸ್ತಕದಲ್ಲಿ ಕೆಲವೇ ಕೆಲವು ದೃಶ್ಯಗಳಿಗೆ ಸಂಭಾಷಣೆಗಳಿವೆ. ಹಲವು ದೃಶ್ಯಗಳಿಗೆ ಟಿಪ್ಪಣಿಗಳಿವೆ. ಪೂರ್ಣಗೊಳಿಸಲಾಗದ 'ತಲೆದಂಡ' ನಾಟಕವು ಕವಿಯ ಮನದೊಳಗಿನ ಹುಡುಕಾಟಕ್ಕೆ ಸಾಕ್ಷಿಯಂತಿದೆ. ಈ ನಾಟಕದ ಬಗ್ಗೆ ಗೊತ್ತಿದ್ದ ಜಿ.ಬಿ. ಜೋಶಿ ಮತ್ತು ಕೀರ್ತಿನಾಥ ಕುರ್ತಕೋಟಿ ಅವರ ಸಲಹೆ–ಸೂಚನೆಯ ಮೇಲೆಯೇ ಗಿರೀಶ ಕಾರ್ನಾಡರು ಬಸವಣ್ಣನವರನ್ನು ಕುರಿತ ನಾಟಕಕ್ಕೆ 'ತಲೆದಂಡ' ಎಂದು ಹೆಸರಿಟ್ಟದ್ದು.

ಕಂಪನಿ ನಾಟಕಗಳ ಶೈಲಿಯಲ್ಲಿಯೇ ಬೇಂದ್ರೆಯವರು ಬರೆದ ಮತ್ತೊಂದು ನಾಟಕ 'ಪ್ರತಿಮಾಗೃಹ' (1943). ಸಂಸ್ಕೃತದ ಭಾಸ ಮಹಾಕವಿಯ 'ಪ್ರತಿಮಾ' ಆಧರಿಸಿದ ಈ ನಾಟಕವು ಕೇವಲ ಭಾಷಾಂತರ ಅಲ್ಲ. 'ಮೇಘದೂತ'ದಲ್ಲಿ ಮಾಡಿದ ಹಾಗೆ ಇದು ಕೂಡ ಪುನರ್‌ಸೃಷ್ಟಿ. ಬೇಂದ್ರೆಯವರು ಕೆಲವು ದೃಶ್ಯಗಳ ಭಾವಾನುವಾದ ಮಾಡಿದ್ದರೆ, ಕೆಲವು ದೃಶ್ಯಗಳನ್ನು ಸ್ವತಂತ್ರವಾಗಿ ಸೇರಿಸಿದ್ದಾರೆ. ಭಾಸನ 'ಪ್ರತಿಮಾ'ದಲ್ಲಿ ರಾಜವಂಶಜ ಮಹಾರಾಜ